## ಕರುಣಾ ಗೋಡೆ

ಶಿವಮೊಗ್ಗ ಪಟ್ಟಣದ ಗೋಪಾಳ ಬಡಾವಣೆಯ ಪೆಟ್ರೋಲ್ ಬಂಕ್ ಆವರಣದಲ್ಲಿ 'ಕರುಣೆಯ ಗೋಡೆ' ಎಂಬ ಹೆಸರಿನಲ್ಲಿ ಮಾನವೀಯತೆ ತಲೆ ಎತ್ತಿದೆ. ಇದರಲ್ಲಿ ಅನುಕೂಲಸ್ಥರು ಬಳಸಿ ಬೇಡವಾದ ಬಟ್ಟೆ ಗೃಹೋಪಯೋಗಿ ವಸ್ತುಗಳನ್ನು ತಂದು ಇಲ್ಲಿ ಇಡುತ್ತಾರೆ. ಅವುಗಳ ಅಗತ್ಯ ಇದ್ದವರು ಅವುಗಳನ್ನು ತಮ್ಮ ಉಪಯೋಗಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ.

—ಸೋಮಶೇಖರ ಡಿ.ಬಿ






## ಜಾತ್ರೆಯಲ್ಲಿ ಜಾಗೃತಿ

ಹೈದರಾಬಾದ್ ಕರ್ನಾಟಕದ ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆ ಅತ್ಯಂತ ಜನಪ್ರಿಯ. ಲಕ್ಷಾಂತರ ಭಕ್ತರು ಜಾತ್ರೆಯಲ್ಲಿ ಬರುತ್ತಾರೆ. ಜಾತ್ರೆ ಎಂದರೆ ಸಿಹಿ ತಿನಿಸುಗಳ ಮಿಠಾಯಿ ಅಂಗಡಿಗಳ ಬಿಡಾರಗಳು ಸಾಲು ಸಾಲು ತಲೆ ಎತ್ತಿರುತ್ತವೆ. ಅಂತಹ ಅಂಗಡಿಗಳಲ್ಲಿ ಈ ವರ್ಷದ ಒಂದು ಅಂಗಡಿ ಮನಸೆಳೆಯುವ ಪ್ರಚಾರ ಫಲಕವನ್ನು ಹಾಕಿತ್ತು. ಅದರಲ್ಲಿ ಶಿಕ್ಷಣವೂ ವ್ಯಾಪಾರದ ಸರಕಾಗಿ ಇರುವ ಹೊತ್ತಿನಲ್ಲಿ ಉಚಿತ ಶಿಕ್ಷಣ ಸರ್ವರಿಗೂ ದಕ್ಕುವಂತೆ ಆಗಲಿ ಎನ್ನುವ ಸದಾಶಯದ ಫಲಕ ಸಾರ್ವಜನಿಕರನ್ನು ಆಕರ್ಷಿಸಿತು.

ರೇಖಾನಾಯಕ ಎನ್.ಡೊಳ್ಳಿನ, ಕೊಪ್ಪಳ

## ವಿಭೂತಿ ಪೆಟ್ಟಿಗೆ

ನಿತ್ಯವೂ ಹಣೆಗೆ ವಿಭೂತಿಯನ್ನು ಶಿವನ ಆರಾಧಕರು ಧರಿಸುತ್ತಾರೆ. ಮಠ– ಮಂದಿರಗಳಲ್ಲಿ ದೊಡ್ಡ ವಿಭೂತಿ ಉಂಡೆಗಳನ್ನು ಇಟ್ಟಿರುತ್ತಾರೆ. ಅದನ್ನು ಇಡಲು ಕಟ್ಟಿಗೆಯ ಸುಂದರ ಕಲಾತ್ಮಕ ಪೆಟ್ಟಿಗೆಯನ್ನೇ ಮಾಡಿಸಿದ್ದಾರೆ. ಕಟ್ಟಿಗೆಯ ಪೆಟ್ಟಿಗೆಯಲ್ಲಿಟ್ಟರೆ ಒಳಗಿರುವ ವಿಭೂತಿ ಒಡೆಯುವುದಿಲ್ಲ. ನೀರಿನಿಂದ ರಕ್ಷಣೆ ಪಡೆಯುತ್ತದೆ ಎನ್ನುವ ನಂಬಿಕೆ ಅವರದಾಗಿರಬೇಕು.

—ಡಾ. ಮಲ್ಲಿಕಾರ್ಜುನ ಕುಂಬಾರ
(ರಾಜೂರ)

